

## ಬರ್ಡ್‌ವಾಚ್ ಮಜಾ

# ಹಕ್ಕಿ ಬಳಗದ ಕಿಸ್ಕುನ್ ಶಾಗ್ ನಿತ್ಯಜಾತ್ರೆ

ಯೂರೋಪಿಯನ್ ಗ್ರೀನ್ ವುಡ್ ಪೆಕ್ಕರ್

**ಹಂಗೇರಿಯ ಕಿಸ್ಕುನ್ ಶಾಗ್ ರಾಷ್ಟ್ರೀಯ ಉದ್ಯಾನವನ ಪಕ್ಷಿಪ್ರಿಯರ ಪಾಲಿಗೆ ಕಾಶಿಯಿದ್ದಂತೆ. ಆ ಪಕ್ಷಿಕಾಶಿಯಲ್ಲಿ ವಿಶ್ವದ ಅಪರೂಪದ ಹಕ್ಕಿಗಳೆಲ್ಲ ಕಾಣಸಿಗುತ್ತವೆ. ಈ ಹಾರಾಡುವ ಹಾಡುಗಳ ದರ್ಶನ ಪಕ್ಷಿಲೋಕದ ಸ್ವಾರಸ್ಯಗಳ ಜೊತೆಗೆ, ಹೊಸ ಹೊಸ ಪರಿಸರ ಪಾಠಗಳನ್ನೂ ನಮಗೆ ಕಲಿಸಿಕೊಡಬಲ್ಲದು.**

■ ಸುಚೇತಾ ಕೆ. ನಾರಾಯಣ
ಚಿತ್ರಗಳು: ಅನೂಪ್ ಕೆ.ಎಸ್.



ಗ್ರೇಟ್ ಬಸ್ಟರ್ಡ್

ಹಂಗೇರಿಯ ರಾಜಧಾನಿ ಬುಡಾಪೆಸ್ಟ್‌ನಲ್ಲಿ ಇಬ್ಬನಿ ತುಂಬಿದ ಮುಂಜಾವು. ನಡುವಲ್ಲೇ ಹರಿಯುವ ಡ್ಯಾನ್ಯೂಬ್ ನದಿಯ ಎರಡೂ ಬದಿಗಳಲ್ಲಿನ ಕಣ್ಸೆಳೆಯುವ ಕಟ್ಟಡಗಳು ಇನ್ನೇನು ಸ್ವಲ್ಪ ಹೊತ್ತಿನಲ್ಲೇ ಪ್ರವಾಸಿಗರಿಂದ ಗಿಜಿಗುಡಲಿದ್ದವು. ನದಿಯ ಆಚೀಚೆ ದಡಗಳನ್ನು ಬೆಸೆಯುವ ಕೊಂಡಿಯಾಗಿದ್ದ ಪ್ರಸಿದ್ಧ ಚೈನ್ ಸೇತುವೆ, ಅದಾಗಲೇ ವಾಹನಗಳ ಓಡಾಟಕ್ಕೆ ತನ್ನನ್ನು ತೆರೆದುಕೊಂಡಿತ್ತು. ಹತ್ತಿರದ ಹೋಟೆಲ್ ಒಂದರಲ್ಲಿ ತಂಗಿದ್ದ ನಾವು, ಅಂದು ಬೆಳಿಗ್ಗೆ 6.30ರ ಸುಮಾರಿಗೆ ಎದ್ದು ಹೊರಡುವ ತಯಾರಿ ನಡೆಸಿದ್ದೆವು. ಎಲ್ಲಿಗೆನ್ನುವಿರಾ? ಅಲ್ಲಿಂದ ಕೆಲ ಕಿಲೋಮೀಟರು ದೂರದಲ್ಲಿದ್ದ ರಾಷ್ಟ್ರೀಯ ಉದ್ಯಾನವನವೊಂದಕ್ಕೆ! ಅಲ್ಲಿ ಕಾಣಸಿಗುವ ಬಣ್ಣ ಬಣ್ಣದ ಪಕ್ಷಿಗಳನ್ನು ನೋಡಿ ಸಂಭ್ರಮಿಸಲು ಅದೊಂದು ಸದಾವಕಾಶವಾಗಿತ್ತು. ತಿಂಡಿ ತಿಂದು, ಮಧ್ಯಾಹ್ನ ಊಟಕ್ಕೆ ಬ್ರೆಡ್ ಜಾಮ್‌ಗಳನ್ನಿಟ್ಟುಕೊಂಡು ಕ್ಯಾಮೆರಾ, ಬೈನಾಕ್ಯುಲರ್‌ಗಳನ್ನು ಹೆಗಲಿಗೇರಿಸಿಕೊಂಡು 7.30ರ ಹೊತ್ತಿಗೆ ಹೋಟೆಲ್‌ನಿಂದ ಹೊರಬಂದೆವು.

ಅಷ್ಟರಲ್ಲಾಗಲೇ ನಮ್ಮ ಗೈಡ್ ಹೋಟೆಲ್‌ನ ಹೊರಗೆ ಕಾಯುತ್ತಿದ್ದ. ಆತನ ಹೆಸರು ಡೇವಿಡ್.